ಶ್ರೀ ವಾಟಾಳ್ ನಾಗರಾಜ್ ತೀರ್ಪು ವಿರುದ್ಧವಾದಾಗ ರಾಜ್ಯವೇನು ತೀರ್ಮಾನಕ್ಕೆ ಬರಬೇಕೆಂದು ನಾವು ಯೋಚನೆ ಮಾಡಬೇಕಲ್ಲವೇ? ಅದೂ ಬಹಳ ಪ್ರಾಮುಖ್ಯವಾಗಿದೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಸಿದ್ದರಾಮಯ್ಯನವರು ಹೇಳಿದ ವಿಚಾರಕ್ಕೆ ಹೇಳುವುದಾದರೆ, Cauvery basin ಗೆ ಸಂಬಂಧಪಟ್ಟವರೆಲ್ಲರನ್ನೂ ಸಭೆಗೆ ಕರೆಯಬೇಕಾದದ್ದು ಸಾಧ್ಯವಾದದು ಆದರೂ ಕೂಡ ಇಲ್ಲಿಯವರೆಗೆ ಬಂದಿರತಕ್ಕಂಥ ಸಂಪ್ರದಾಯವೆಂದರೆ ಆಯಾ ಪಕ್ಷದ ಮುಖಂಡರುಗಳನ್ನು ಸರ್ವ ಪಕ್ಷದ ಸಭೆಗೆ ಕರೆಯಲಾಗಿದೆ CPI ನವರು ಈಗ ಯಾವ ಪ್ರತಿನಿಧಿಗಳೂ ಇಲ್ಲ ಆದರೂ ಅವರ ಅಧ್ಯಕ್ಷರನ್ನು ಸಭೆಗೆ ಕರೆದಿದ್ದಾರೆ ಯಾರ್ಯಾರನ್ನು ಸಭೆಗೆ ಕರೆದಿದ್ದಾರೆನ್ನುವ ಪಟ್ಟಿ ನನ್ನ ಹತ್ತಿರ ಇಲ್ಲ ಆ ಪಟ್ಟಿ ಬಗ್ಗೆ ಅಧಿಕಾರಿಗಳ ಹತ್ತಿರ ಕೇಳಿದೆ, ಅವರ ಹತ್ತಿರವೂ ಇಲ್ಲ ಆ ಪಟ್ಟಿಯನ್ನು ನಾನು ತರಿಸಿಕೊಂಡು, ಆಕಸ್ಮಾತ್ ಆಗಿ ಅದರಲ್ಲಿ ಇದ್ದರೆ ತಾವೆಲ್ಲರೂ ಕೂಡ ಅದರಲ್ಲಿ ಬರುತ್ತೀರಿ ಸಭಾ ನಾಯಕರನ್ನು, ಪಕ್ಷದ ಮುಖಂಡರನ್ನು ಸಭೆಗೆ ಕರೆದಿದ್ದಾರೆ ಮತ್ತೆ, ಬೇಕು ಎನ್ನುವುದಾಗಿದ್ದರೆ, ಮಾತನಾಡಿ ಈ ಬದಲಾವಣೆಗಳನ್ನು ಮಾಡಿ ತಮಗೆ ತಿಳಿಸುತ್ತೇನೆ

ಉಪಾಧ್ಯಕ್ಷರು ಈಗ ಸಭೆಯು ಮುಕ್ತಾಯವಾಗಿ ಸೋಮವಾರ ಬೆಳಗ್ಗೆ 11–00 ಗಂಟೆಗೆ ಸೇರುವುದು

(ಸದನವು ಮಧ್ಯಾಹ್ನ 2 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನ ದಿನಾಂಕ 5ನೇ ಫೆಬ್ರವರಿ 2007ರ ಸೋಮವಾರದಂದು ಬೆಳಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ – I

2(68) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರೇಷ್ಮೆ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕಳೆದ ಮೂರು ವರ್ಷಗಳಲ್ಲಿ ಲಾಟರಿಯಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು , (ವರ್ಷವಾರು, ಪೇಪರ್ ಲಾಟರಿ, ಆನ್‌ಲೈನ್ ಲಾಟರಿ ಇವುಗಳ ಬಗ್ಗೆ ಪ್ರತ್ಯೇಕವಾಗಿ ವಿವರ ನೀಡುವುದು) ,

ಆ) ಲಾಟರಿಯನ್ನು ಸಂಪೂರ್ಣವಾಗಿ ನಿಷೇಧ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಇ) ಹಾಗಿದ್ದಲ್ಲಿ, ಎಂದಿನಿಂದ ಈ ನಿಷೇಧವನ್ನು ಜಾರಿಗೆ ತರಲಾಗುವುದು ,

ಈ) ಲಾಟರಿಯನ್ನು ರಾಜ್ಯ ಸರ್ಕಾರ ನಿಷೇಧ ಮಾಡಿದ್ದನ್ನು ರಾಜ್ಯ ಉಚ್ಚ ನ್ಯಾಯಾಲಯ ರದ್ದುಪಡಿಸಿ, ಆದೇಶ ನೀಡಿದ್ದರ ವಿರುದ್ಧ ಸರ್ಕಾರ ಮೇಲ್ಮನವಿ ಸಲ್ಲಿಸಿದೆಯೇ ,

ಉ) ಮೇಲ್ಮನವಿ ಸಲ್ಲಿಸದಿದ್ದಲ್ಲಿ ಕಾರಣಗಳೇನು ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರೇಷ್ಮೆ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಲಾಟರಿಯಿಂದ ಸರ್ಕಾರಕ್ಕೆ ಬಂದಿರುವ ಆದಾಯ ಈ ಕೆಳಕಂಡಂತಿದೆ

(ರೂ ಕೋಟಿಗಳಲ್ಲಿ)

ವರ್ಷ	ಪೇಪರ್ ಲಾಟರಿ	ಆನ್‌ಲೈನ್ ಲಾಟರಿ	ಒಟ್ಟು
2004–05	90 00	––	90 00
2005–06	90 00	––	90 00
2006–07 (ಡಿಸೆಂಬರ್ 2006ರ ಅಂತ್ಯದವರೆಗೆ	34 30	––	34 30

ಕರ್ನಾಟಕ ರಾಜ್ಯ ಆನ್‌ಲೈನ್ ಲಾಟರಿಯನ್ನು ದಿ 15 7 2004 ರಿಂದ ನಿಲ್ಲಿಸಲಾಗಿದೆ ಲಾಟರಿ ನಡೆಸುವಲ್ಲಿ ಬೆಟ್ಟಿಂಗ್ ಟ್ಯಾಕ್ಸ್‌ನಿಂದ ಬಂದ ಆದಾಯ ಈ ಕೆಳಕಂಡಂತಿದೆ

(ರೂ ಕೋಟಿಗಳಲ್ಲಿ)

ವರ್ಷ	ಪೇಪರ್ ಲಾಟರಿ	ಆನ್‌ಲೈನ್ ಲಾಟರಿ	ಒಟ್ಟು
2004–05	63 09	12 94	76 03
2005–06	75 83	––	75 83
2006–07 (ಏಪ್ರಿಲ್‌ನಿಂದ ಡಿಸೆಂಬರ್ 2006ರವರೆಗೆ	75 25	10 37	85 62

ಆ) ಪರಿಶೀಲನೆಯಲ್ಲಿದೆ

ಇ) ಪರಿಶೀಲನೆಯಲ್ಲಿರುವುದರಿಂದ ಈ ಪ್ರಶ್ನೆ ಈ ಹಂತದಲ್ಲಿ ಉದ್ಭವಿಸುವುದಿಲ್ಲ

ಈ) ರಾಜ್ಯ ಸರ್ಕಾರ ಪೇಪರ್ ಲಾಟರಿಯನ್ನು ನಿಷೇಧ ಮಾಡಿರುವುದಿಲ್ಲ ಗಣಕೀಕೃತ ನೆಟ್‌ವರ್ಕ್ ಲಾಟರಿಗಳನ್ನು ರಾಜ್ಯ ಸರ್ಕಾರ ನಿಷೇಧ ಮಾಡಿದ್ದರ ಹಿನ್ನೆಲೆಯಲ್ಲಿ ಹೊರ ರಾಜ್ಯದ ಲಾಟರಿ ಏಜೆಂಟರು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಪುರಸ್ಕರಿಸಿ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ರದ್ದುಪಡಿಸಿದ್ದರ ಹಿನ್ನೆಲೆಯಲ್ಲಿ, ಅದರ ವಿರುದ್ದ ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತದೆ

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ

4(70) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮೈಸೂರು ಕಾಗದ ಕಾರ್ಖಾನೆ ಅರಣ್ಯ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ,

ಆ) ಇದರಲ್ಲಿ ಖಾಯಂ ಆಗದೇ ದಿನಗೂಲಿ ಅಥವಾ ಸಂಚಿತ ವೇತನ (consolidated pay) ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ,

ಇ) ಖಾಯಂಗೊಳಿಸುವಂತೆ ಈ ನೌಕರರು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್, ಮಧ್ಯಮ, ಸಣ್ಣ ಕೈಗಾರಿಕಾ ಸಚಿವರು)

ಅ) 494 ಜನ

ಆ) ಎಲ್ಲಾ 494 ಮಂದಿ ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ